DAC-302
T.P-2

(1)

51st Year of Publication ★ SATYAVADI Daily, MYSORE 4

Reg No B G 155 ಶ್ರೀ 16-5-1966

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನ್ಯೆಸೆ
ಅಂಚೆಯವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು : ಆರಮನೆ ಶರತ್ಕೀರ್ತಿ ಎಂ. ವಿ. ಸುಬ್ಬರಾವ್ ★ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನ್ಯೆಸೆ

A STRAIGHT DEAL
If you want a Straight Deal
Then go Straight to
BANK ROAD BAHUSAR.
The Shop with one Price,
a Fair Price, and a really
Favourable Price.
No worry. No Higgle-haggling.

ಉಪ ಪ್ರಧಾನಿಗಳ ವಿರುದ್ಧ ಕಪ್ಪು ಬಾವುಟ ಪ್ರದರ್ಶನ

ಮೈಸೂರು ಅಪೇರಾ ಟಾಕೀಸ್ ಬಳಿ ಹಾಕಿರುವ ತಮ್ಮ ಸ್ವಂತ ಭವ್ಯ
ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತಕದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಆಶ್ಚರ್ಯಪಡುವ ಇಂದ್ರಜಾಲಾಟ ನಡೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ನ್ಯೆಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಪ್ರಾರಂಭದಲ್ಲೇ ನೆನೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳವಾಗುತ್ತಿರುವ ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ನಿರ್ವಾಪಗಳಿಂದ ನೀಡಿ ಸಹಕರಿಸಬೇಕಾಗಿ ಮನವಿಮಾಡಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇನೆ.

ಸಂಪಾದಕ 'ಸತ್ಯವಾದಿ'
ಜಾಮರಾಜಪುರಂ, ಮೈಸೂರು 4.

ಪತ್ರಿಕಾಗೋಷ್ಠಿ

ಮೈಸೂರು— ನಿನ್ನೆ ಪೌರಸಭಾಧ್ಯಕ್ಷರು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ, ತಾ॥ 19 ರಿಂದ 12 ದಿನ ಕಾಲ ಸಂಜೆ ಹೊತ್ತು ಟೌನ್‌ಹಾಲಿನಲ್ಲಿ ನಡೆಸಲಿರುವ ಲಲಿತಕಲಾ ಮಹೋತ್ಸವದ ವಿವರಗಳನ್ನು ತಿಳಿಸಿದರು — ಪೌರಸಭೆಯ ಶತವರ್ಷೋತ್ಸವವು ಸೆಪ್ಟಂಬರ್-ಅಕ್ಟೋಬರಿನಲ್ಲಿ ನಡೆಸಲಾಗುವುದೆಂದು ಹೇಳಿದರು — ಆಹಾರ ಪದಾರ್ಥಗಳ ಬೆಲೆ ಸಾಕಷ್ಟು ಕಡಮೆಯಾಗಿರುವುದರಿಂದ ತಿಂಡಿ ಬೆಲೆ ಇಳಿಸಬೇಕೆಂದು ಹೋಟಲು ಮಾಲೀಕರಲ್ಲಿ ಒತ್ತಾಯಪೂರ್ವಕ ಮನವಿ ಮಾಡಿದರು.

★

ಕಚ್ ಸತ್ಯಾಗ್ರಹಿಗಳ ಬಿಡುಗಡೆ

ನವದೆಹಲಿ— ಕಚ್ ಶರಣು ವಿರುದ್ಧದ ಎಲ್ಲ ಸತ್ಯಾಗ್ರಹಿಗಳು, ಪುರುಷರು ಸ್ತ್ರೀಯರು ಮಕ್ಕಳು 850 ಮಂದಿ ತಿಹಾರ್ ಜೈಲಿನಿಂದ ಭಾರತ ಗೃಹಸಚಿವಾಲಯದ ಆಜ್ಞೆಯಂತೆ ಬಿಡುಗಡೆಯಾದರು.

ಪುನರ್ಜನ್ಮ

ಜಯಪುರದಲ್ಲಿನ ರಾಜಸ್ಥಾನ ವಿಶ್ವವಿದ್ಯಾನಿಲಯದ ಪ್ರೊ॥ ಬ್ಯಾನರ್ಜಿಯವರು, ಪುನರ್ಜನ್ಮವು ನಿಜವೆಂದು ತಮಗೆ ದೊರೆತ ಸಾಕ್ಷ್ಯಗಳಿಂದ ನಿರ್ಧರಿಸಿದ್ದಾರೆ. ವಿಶ್ವದ ವಿವಿಧ ಸ್ಥಳಗಳಲ್ಲಿ 600 ಮಂದಿ ತಮ್ಮ ಹಿಂದಿನ ಜನ್ಮದ ವಿಷಯಗಳ ಬಗ್ಗೆ ಇವರು ಸಂಶೋಧನೆ ಮಾಡಿದ್ದಾರೆ. ಇವರ ಈ ಸಂಶೋಧನೆ ನೆರವಿಗಾಗಿ ಒಬ್ಬ ಅಮೇರಿಕಾ ಕೋಟ್ಯಾಧಿಪತಿಯು ತನ್ನ ವಿಲ್‌ನಲ್ಲಿ 2 ಮಿಲಿಯ ಡಾಲರು ಬಿಟ್ಟಿದ್ದಾನೆ.

ಷೇಕ್ ಅಬ್ದುಲ್ಲರ ಪ್ರಲಾಪ

ಶ್ರೀನಗರ— ಸಿಂಕೆಂಗಿಗೂ ಜಿಲ್‌ಜಿಟ್‌ಗೂ ಸಂಸರ್ಕವಾಗಿ ರಸ್ತೆ ನಿರ್ಮಾಣದ ಬಗ್ಗೆ ಚೀನಾ—ಪಾಕಿಸ್ತಾನದ ಒಪ್ಪಂದವು ಆಕ್ಷೇಪಣೀಯವಲ್ಲವೆಂದು ಷೇಕ್‌ರು ಹೇಳಿದರು — ಭಾರತವು ಚೀನಾಪೊಡನೆ ಯಾವ ಪರತ್ತೂ ಇಲ್ಲದೆ ಮಾತುಕತೆ ನಡೆಸಬೇಕೆಂದು ಹೇಳಿದರು — ಭಾರತ—ಪಾಕಿಸ್ತಾನಗಳಿಗೆ ಸರಿಕಂಡರೆ ಕಾಶ್ಮೀರವನ್ನು ಸ್ವತಂತ್ರ ರಾಜ್ಯವನ್ನಾಗಿ ಮಾಡಬೇಕೆಂಬ ತಮ್ಮ ನಿಲುವಿನಲ್ಲಿ ಬದಲಾವಣೆ ಇಲ್ಲವೆಂದರು — ತಮಗೆ ಜಮ್ಮು ಕಾಶ್ಮೀರ ಮತ್ತು ಉಪಖಂಡದಲ್ಲಿ ಶಾಂತಿ ಇರಬೇಕೆಂಬುದೇ ಇಚ್ಛೆ ಎಂದರು.

★

ಹೀಗಾದರೆ .....

ಬೆಂಗಳೂರು— ಮೈಸೂರು ತನ್ನ ಹಿರಿಯ ನೀರಾವರಿ ಪ್ರಾಜೆಕ್ಟುಗಳನ್ನು ಮುಗಿಸಲು ರೂ. 300 ಕೋಟಿ ದೊರಕಿಸಿಕೊಂಡರೆ, ಅದು 4–5 ವರ್ಷಗಳಲ್ಲಿ ಆಹಾರ ಸ್ವಾವಲಂಬನೆ ಪಡೆಯುವುದು ಮಾತ್ರವಲ್ಲದೆ, ಕೇರಳದಲ್ಲಿನ ಪೂರ್ಣ ಆಹಾರ ಖೋತಾವನ್ನು ಭರ್ತಿಮಾಡಬಲ್ಲದೆಂದು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಆಹಾರ ಮತ್ತು ವ್ಯವಸಾಯ ಸಿಂಪೊಸಿಯಂ ಉದ್ಘಾಟಿಸುತ್ತಾ ಹೇಳಿದರು.

●

ಶಿವವಿಗ್ರಹ ಸುಟ್ಟುಹೋಯಿತು

ಭದ್ರಾಚಲ— ರಾಯಗುಡಂ ದೇವಾಲಯದಲ್ಲಿದ್ದ ಬಹು ಖ್ಯಾತ ಮತ್ತು ಪುರಾತನ ಶ್ರೀ ಕೇದಾರೇಶ್ವರ ಶಿವ ವಿಗ್ರಹವು ಅದನ್ನು ಹೆಂಗಾಮಿಯಾಗಿ ಇಟ್ಟಿದ್ದ ಷೆಡ್ಡಿಗೆ ಬೆಂಕಿಬಿದ್ದು ನಾಶವಾಯಿತು — ದೇವಾಲಯದ ಪುನರ್ನಿರ್ಮಾಣ ನಡೆಯುತ್ತಿದೆ — ಈ ವಿಗ್ರಹವನ್ನು ಅಗಸ್ತ್ಯ ಮಹಾಮುನಿಗಳಿಂದ ಪ್ರತಿಷ್ಠಿಸಲ್ಪಟ್ಟಿದೆಂದೂ, ಇದರಲ್ಲಿ ಶಿವಲಿಂಗ ಮತ್ತು ಶಿವವಿಗ್ರಹವಿದ್ದಿತೆಂದೂ ಹೇಳಲಾಗಿದೆ.

ಕಪ್ಪು ಬಾವುಟ ಪ್ರದರ್ಶನ

ಅಹಮದಾಬಾದು—ಸರಕಾರವು ಕಚ್ ತೀರ್ಪನ್ನು ಒಪ್ಪಿರುವದನ್ನು ಪ್ರತಿಭಟಿಸಿ ನಿನ್ನೆ ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಮುಂದೆ ಕಪ್ಪು ಬಾವುಟ ಪ್ರದರ್ಶನ ಮಾಡಲಾಯಿತು — ಓರ್ವ ಶಾಸನಸಭಾ ಸದಸ್ಯರೂ, ಹಲವು ಕಾರ್ಪೊರೇಟರರೂ ಸೇರಿ 33 ಮಂದಿ ದಸ್ತಗಿರಿ ಮಾಡಲ್ಪಟ್ಟರು — ಇವರನ್ನು ಪೋಲೀಸರು ಹಿಡಿದುಕೊಂಡು ಹೋದಾಗ ನೂರುಗಟ್ಟಲೆ ಜನರು ಜಯಘೋಷ ಮಾಡಿದರು.

●

ಹೈಕೋರ್ಟಿನಲ್ಲಿ ಪ್ರಾದೇಶಿಕ ಭಾಷೆ

ತಿರುವೇಂದ್ರಂ— ಹೈಕೋರ್ಟಿನಲ್ಲಿ ಪ್ರಾದೇಶಿಕ ಭಾಷೆಗಳು ಇಂಗ್ಲೀಷಿನ ಸ್ಥಾನವನ್ನು ಹೊಂದಬೇಕೆಂದು ಭಾರತ ನ್ಯಾಯಾಂಗ ಮಂತ್ರಿ ಶ್ರೀ ಗೋವಿಂದ ಮೆನನ್ ಹೇಳಿದರು — ಸುಪ್ರೀಂ ಕೋರ್ಟಿನಲ್ಲಿ ಹಿಂದಿಯು ಸ್ಥಾನ ಪಡೆಯುವವರೆಗೆ ಅಲ್ಲಿ ಇಂಗ್ಲೀಷು ಇರಬೇಕೆಂಬುದನ್ನು ಒಪ್ಪಿಕೊಂಡರು.

★

ಭಾರತಕ್ಕೆ ಸಾಲಾ

ನವದೆಹಲಿ— ಭಾರತಕ್ಕೆ ಅವಶ್ಯವಸ್ತುವಾಯ ಮತ್ತು ಕೈಗಾರಿಕೆ ಪದಾರ್ಥಗಳನ್ನು ಆಮದುಮಾಡಿಕೊಳ್ಳಲು 225 ಮಿಲಿಯ (ರೂ. 168·75 ಕೋಟಿ) ಪ್ರಾಜೆಕ್ಟೇತರ ಸಾಲ ಕೊಟ್ಟಿದೆ.

★

ನವದೆಹಲಿ— ಗಂಡಕಾಕ್ ಪ್ರಾಜೆಕ್ಟಿಗೆ ಕಳಿದ ವರ್ಷ ಭಾರತವು ತೆಗೆದುಕೊಂಡು ಹೋದ ಪದಾರ್ಥಗಳಿಗೆ ಕಸ್ಟಂಡ್ಯೂಟಿಯಾಗಿ ಭಾರತವು ನೇಪಾಳಕ್ಕೆ ರೂ. 12 ಲಕ್ಷ ಪಾವತಿ ವಯಿಡಿಕೆ.

★

ತಿರುಪತಿ— ಮೈಸೂರು ಪ್ರವಾಸಿ ಸೌಧ ವೆಂಬ ಅನೇಕ ಅಂತಸ್ತಿನ ಸಂಕೀರ್ಣವನ್ನು ನಿನ್ನೆ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಉದ್ಘಾಟಿಸಿದರು.

ತುಳಸೀದಾಸ' ಮತ್ತು ಕಳ್ಳ

(ಮುಂದುವರಿದುದು)

ಇದನ್ನು ಕೇಳಿದ ತುಳಸೀದಾಸನು— ಈ ರಾವಲುಗಾರನು ತನ್ನ ಸ್ವಾಮಿ ಶ್ರೀ ರಾಮಚಂದ್ರನಲ್ಲದೆ ಬೇರೆ ಯಾರೂ ಇಲ್ಲವೆಂದು ತುಳಸೀದಾಸನು ತಕ್ಷಣ ತಿಳಿದು ಕೊಂಡನು.

ತನ್ನ ಚಿಕ್ಕ ಆಸ್ತಿಯನ್ನು ನೋಡಿಕೊಳ್ಳಲು ವಿಶ್ವದ ಸ್ವಾಮಿಯು ಸದಾ ಬಿಲ್ಲು ಬಾಣ ಹಿಡಿದು ಎಚ್ಚರಿಕೆಯಿಂದ ಕಾಯುತ್ತಿದ್ದುದನ್ನು ತಿಳಿದು ಅಳಲಾರಂಭಿಸಿದನು. ತನ್ನ ಸ್ವಾಮಿಯನ್ನು ಸೇವಕನಾಗಿಸಿದ ತನ್ನ ಘನತೆಗೆ ನಾಚಿಕೆಪಟ್ಟಕೊಂಡು, ತುಳಸಿದಾಸನು ಆ ಕಳ್ಳನ ಕಾಲಿಗೆ ಬಿದ್ದು— ನೀನು ಶ್ರೀ ರಾಮಚಂದ್ರನನ್ನು ನೋಡಿದ್ದರಿಂದ, ನೀನೇ ಧನ್ಯನು : ನಿನಗೆ ಬೇಕಾದುದನ್ನೆಲ್ಲಾ ತೆಗೆದುಕೋ, ಎಂದು ಹೇಳಿದನು

ಸಾಧುವಿನ ಸಂಪರ್ಕವು ಕಳ್ಳನನ್ನು ಸತ್ಪುರುಷನನ್ನಾಗಿ ಪರಿವರ್ತಿಸಿತು. ತನ್ನಲ್ಲಿದುದನ್ನೆಲ್ಲಾ ಕೊಟ್ಟು, ತನ್ನ ದುಷ್ಕೃತ್ಯವನ್ನು ಬಿಟ್ಟು, ತುಳಸೀದಾಸದ ಪರಮ ಶಿಷ್ಯನಾದನು (ಟ್ರೂತ್)

★

ಕ್ಷಾಮನ್ನೋಡಿಸಲು ಸಂಗೀತ

ಬರ್ಲಿನ್ (ಡಾಡ್) — ಭಾರತದಲ್ಲಿ ಕ್ಷಾಮ ದಾರಿದ್ರ್ಯಗಳನ್ನು ಹೆಸರಿಲ್ಲದಂತೆ ಮಾಡುವ ಸಲುವಾಗಿ ಡ್ಯೂಸ್‌ಬರ್ಗ್ ಜರ್ಮನಿ ನಗರದಲ್ಲಿ ಒರಿಸ್ಸಾ ಕ್ಲಬ್ ಎಂಬ ಸಂಘವನ್ನು ಆರಂಭಿಸಲಾಗಿದೆ ; ಇದನ್ನು ಆರಂಭಿಸಿದ ಜರ್ಮನ್ ಮಹಿಳೆ ಜನರಿಂದ ಚಂದಾವಸೂಲ್ಮಾಡಿ ಆಂಬ್ಯುಲೆನ್ಸು ಗಾಡಿಯೊಂದನ್ನು ಒರಿಸ್ಸಾಕ್ಕೆ ಕಳುಹಿಸಿದಳು. ಸಂಘ ಭಾರತದ ಕಷ್ಟನಿವಾರಣೆಗೆ ನಿಧಿ ಶೇಖರಿಸುತ್ತಿದೆ. [ಯೂಪಿಎಸ್]

★

ಗೋವಧೆಕೂಡಲೆ ನಿಷೇಧವಾಗಲಿ

Cow Slaughter should be banned Immediately

SHAKTI SUDHA

A Superb Tonic

Protect the Cow

ಗೋರಕ್ಷಣೆಯಮತ್ತು ಪ್ರಾಣಿದಯಾ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ತಳೆಯಲಿ
ಶ್ರೀದಕ್ಷಿಣಾಮ್ನಾಯ ಶೃಂಗೇರಿ ಜಗದ್ಗುರು ಶ್ರೀ ಶ್ರೀಮದ್ ಜಗದ್ಗುರು
ಸ್ವಾಮಿಗಳವರು ಅಪೇಕ್ಷಿಸಿರುವ ಅಭಿಪ್ರಾಯವಾಗಿದೆ
ಕನ್ನಡಿಗರಲ್ಲಿ ಗೋರಕ್ಷಣೆಯ ಪ್ರಜ್ಞೆಯನ್ನು ಕಾಪಾಡಿಕೊಂಡು, ಪಶುವೈದ್ಯಕೀಯ
ವಿಭಾಗದ ವಿಶೇಷ ಪ್ರಯತ್ನಕ್ಕೆ ; ಪಶುಗಳಿಗೆ ಚಂದಾ 50 ಪೈಸೆ

Quality Printing — Neat Binding

Lakshminarasimha Press

Sivarampet, Mysore

ವುಡ್‌ಲಾಂಡ್ಸ್ ಜನಪ್ರಿಯ 2 ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ಸಾಜಿದ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಅಪೇರ— 10-5-68 ರಿಂದ

.... ಅಶೋಕ್ ಕನ್ನಡ ಚಿತ್ರ ....

ಬೆಂಗಳೂರು ಮೇಲ್

ಪಾತ್ರ : ರಾಜಕುಮಾರ್ ನರಸಿಂಹರಾಜು ಕೊಟ್ಟಾರಕರ್
ಅಶ್ವತ್ ಜಯಂತಿ ವಿಜಯಲಲಿತ

Help The Gorakshana

ಗೋರಕ್ಷಣೆಗೆ ಹೆಂಜಲ ನೀಡಿ

— ಗೋರಕ್ಷಣಾ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಸೂಲಿದಿಕ್ಕಳೆದಿರುವವರು ಇನ್ನೆಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ. ಶಾಮಣ್ಣಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅಸಂಕನಂಬಿಹಯ್ಯಂಗಾರ್, ಶಾಸ್ತ್ರಿಧರ್ಮಪ್ರಚಾರಸಭಾ ಹೊಂಗನೂರು ಪೋ
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown, that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharo Nirata M S Krishna Rao (Proprietor) at the Satyavadi Press Chamarrajpuram, Mysoe 4